ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಮಂಗಳವಾರ, ೧೮ನೇ ಏಪ್ರಿಲ್ ೧೯೯೫ ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

Tuesday, 18th April 1995 Sayana Sowra Chithra 16 (S.E.)

ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, 11-30 ಆದರೂ ಮಂತ್ರಿಗಳಿಗೆ ಇನ್ನೂ ಬಿಡುವಾಗಿಲ್ಲ, ಇನ್ನೂ ಬಂದಿಲ್ಲ ಆದರೂ ಕಾರ್ಯಕಲಾಪ ಪ್ರಾರಂಭ ಮಾಡಬಹುದು ಎಂದು ಹೇಳುವುದಾದರೆ. . . .

ಅಧ್ಯಕ್ಷರು : ಐದಾರು ಜನ ಇದ್ದಾರಲ್ಲ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಹರಡಿರುವ ಮಲೇರಿಯಾ ರೋಗದ ನಿಯಂತ್ರಣ.

* ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಈಗ ತಾನೇ ತಂದೆ . ಇವತ್ತು ಕರ್ನಾಟಕ ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ವಿಶೇಷವಾಗಿ ಶಿವಮೊಗ್ಗ ಜಿಲ್ಲೆ ಚಿತ್ರದುರ್ಗ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಲೇರಿಯಾ ರೋಗ ವ್ಯಾಪಕವಾಗಿ ಹರಡುತ್ತಿದೆ. ಈಗ ತಾನೇ ನಾನು ಒಂದು ವರದಿಯನ್ನು ಆರೋಗ್ಯ ಇಲಾಖೆಯಿಂದ ತರಿಸಿಕೊಂಡೆ. ಒಂದು ವಾರದಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 240 ಕೇಸ್ ಪಾಸಿಟೀವ್ ಅಂತ ಹೇಳಿ ತಿಳಿದಿರುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇದೇ ಒಂದು ಮಲೇರಿಯಾ ರೋಗಕ್ಕೆ ತುತ್ತಾಗಿ ಇಬ್ಬರು ಸಾವಿಗೀಡಾಗಿದ್ದಾರೆ ಎನ್ನುವ ಸುದ್ದಿ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿ, ಶಿಕಾರಿಪುರ, ಹೊಸನಗರ, ಭದ್ರಾವತಿಯಲ್ಲಿ ವ್ಯಾಪಕವಾಗಿ ಮಲೇರಿಯಾ ಹರಡುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ತಾಲ್ಲೂಕಿನಲ್ಲಿ ವ್ಯಾಪಕವಾಗಿದೆ. ಮೈಸೂರು ಜಿಲ್ಲೆಯಲ್ಲಿ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಈ ರೀತಿ ಮಲೇರಿಯಾ ರೋಗ ಹರಡುತ್ತಾ

ಇದೆ ಎಂದು ಎಲ್ಲ ಕಡೆ ಸುದ್ದಿ ಬರುತ್ತಿದೆ. ಸನ್ಮಾನ್ಯ ಅಧ್ಯಕ್ಷರೆ, ರಕ್ತವನ್ನು ಪರೀಕ್ಷೆ ಮಾಡುವಂಥ ಪದ್ಧತಿ. ಇತ್ತು. ಈಗ ಸಂಪೂರ್ಣವಾಗಿ ಇಲಾಖೆಯವರು ಅದನ್ನು ಕೈಬಿಟ್ಟಿದ್ದಾರೆ. ಕ್ಲೋರೋಫಿನ್‌ನಂಥ ಮಾತ್ರೆಗಳನ್ನು ವ್ಯಾಪಕವಾಗಿ ಕೊಡುವಂಥ ವ್ಯವಸ್ಥೆ ಆಗಬೇಕಾಗಿತ್ತು. ಎಲ್ಲೂ ಈ ಒಂದು ಮಾತ್ರೆಯನ್ನೂ ಸರಬರಾಜು ಮಾಡಿಲ್ಲ. ಬಹುಶಃ ಈ ರೋಗ ವ್ಯಾಪಕವಾಗಿ ಕರ್ನಾಟಕ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಹರಡುತ್ತಾ ಇದೆ. ಇದರ ಬಗ್ಗೆಯೂ ಯಾವುದೇ ಒಂದು ಪ್ರಯತ್ನ ನಡೆಯುತ್ತಾ ಇಲ್ಲ. ಕೊಳಚೆ ಪ್ರದೇಶಗಳ ಚರಂಡಿಗಳಲ್ಲಿ ಸೊಳ್ಳೆಗಳು ಏನು ಹೆಚ್ಚು ಉತ್ಪನ್ನ ಆಗುತ್ತಾ ಇದೆ. ಅದನ್ನು ನಿಯಂತ್ರಣ ಮಾಡುವಂಥ ಪ್ರಯತ್ನ ಇವತ್ತು ಸರ್ಕಾರದ ಕಡೆಯಿಂದ ಆಗುತ್ತಿಲ್ಲ ಈಗ ಯಾವುದಾದರೂ ಮಲೇರಿಯಾ ರೋಗ ಬಂದಿರುವಂಥ ವ್ಯಕ್ತಿಗೆ ಸೊಳ್ಳೆ ಕಡಿದು ಇನ್ನೊಬ್ಬನಿಗೆ ಕಡಿದ ತಕ್ಷಣ ವ್ಯಾಪಕವಾಗಿ ಈ ರೋಗ ಹರಡುವಂಥದ್ದು ಎಲ್ಲಾ ಕಡೆ ನಾವು ಕಾಣುತ್ತಿರತಕ್ಕ ಸಂಗತಿ. ಅದಕ್ಕೋಸ್ಕರ ಸರ್ಕಾರಕ್ಕೇನಾದರೂ ಮಾಹಿತಿ ಬಂದಿದೆಯೆ? ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ರೀತಿ 240 ಕೇಸ್ ಪಾಸಿಟೀವಾಗಿ ಬಂದಿರುವಂಥದ್ದು ಗೊತ್ತಿದೆಯೋ, ಈ ರೀತಿ ಪಾಸಿಟೀವ್ ಎಂದು ಬಂದಾಗ ಇದಕ್ಕೆ ಒಂದು ರ್‍ಯಾಡಿಕಲ್ ಟ್ರೀಟ್‌ಮೆಂಟ್ ಕೊಡುತ್ತಿದ್ದರು. ಅದು ನೆಗೆಟೀವ್ ಎಂದು ಬರುವವರಿಗೂ ಅವರಿಗೆ ಟ್ರೀಟ್‌ಮೆಂಟ್ ಕೊಟ್ಟು ಅದನ್ನು ಸರಿಪಡಿಸುತ್ತಿದ್ದರು. ಇಲ್ಲದಿದ್ದರೆ ಇನ್ನೊಬ್ಬರಿಗೆ ಹರಡುತ್ತದೆ ಎಂದು ಅದನ್ನು ವ್ಯಾಪಕವಾಗಿ ಬಂದೋಬಸ್ತ್ ಮಾಡುವಂಥ ಕೆಲಸಕಾರ್ಯಗಳು ಹಿಂದೆ ನಡೆಯುತ್ತಾ ಇತ್ತು. ಅದಕ್ಕೋಸ್ಕರ ನಾನು ಸಂಬಂಧಪಟ್ಟ ಇಲಾಖೆಯಲ್ಲಿ ವಿವರವನ್ನು ತರಿಸಿಕೊಂಡಿದ್ದೇನೆ. ಇನ್ನು ಬೇರೆ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿದೆಯೋ ಗೊತ್ತಿಲ್ಲ, ಇನ್ನೂ ಅನೇಕ ಸದಸ್ಯರು ತಮ್ಮ ಗಮನಕ್ಕೆ ತರುವವರಿದ್ದಾರೆ. ನಾನು ಏತಕ್ಕೆ ಇವತ್ತು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ ತಕ್ಷಣ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೀರಾ? ವ್ಯಾಪಕವಾಗಿ ಕೊಳಚೆ ಪ್ರದೇಶಗಳ ಚರಂಡಿಗಳಲ್ಲಿ ಆ ಸೊಳ್ಳೆಗಳು ಹೆಚ್ಚು ಉತ್ಪಾದನೆಯಾಗದಂತೆ ತಡೆಯುವ ಪ್ರಯತ್ನ ಮತ್ತು ಈ ಕ್ಲೋರೋಫಿನ್ ಮಾತ್ರೆಗಳನ್ನು ಸರಿಯಾದ ರೀತಿ ದೊಡ್ಡ ಪ್ರಮಾಣದಲ್ಲಿ ಸರಬರಾಜು ಮಾಡುವುದರ ಕಡೆ ವಿಶೇಷವಾದಂಥ ಪ್ರಯತ್ನ, ಈ ಬೇಸಿಕ್ ಹೆಲ್ತ್ ವರ್ಕರ್‌ನ್ನು ಇದಕ್ಕೆ ನೇಮಕ ಮಾಡಿ ಅದರ ಕಡೆ ವಿಶೇಷವಾಗಿ ಗಮನ ಕೊಡುವಂಥದ್ದು, ಇದರ ಬಗ್ಗೆ ಸರ್ಕಾರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ.

* ಶ್ರೀ ಅರಗಂ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ತಾವು ಮಾನ್ಯ ಮಂತ್ರಿಗಳನ್ನು ಕರೆಯಿಸಿ ತಮ್ಮ ಛೇಂಬರ್‌ನಲ್ಲಿ ನನ್ನ ವಿನಂತಿ ಮೇರೆಗೆ ಮಾತನಾಡಿದಿರಿ. ನಿನ್ನೆ ರಾತ್ರಿ ನಾನು ಟೆಲಿಫೋನ್ ಮಾಡಿದಾಗ ಭಯಾನಕವಾದ ಸುದ್ದಿ ನನ್ನ ತಾಲ್ಲೂಕಿನಿಂದ ನನ್ನ ಕ್ಷೇತ್ರದಿಂದ ಬಂದಿದೆ. ಒಂದೇ ವಾರದಲ್ಲಿ 242 ಜನ ವಾಲಂಟರಿಯಾಗಿ ರಕ್ತ ಪರೀಕ್ಷೆ ಮಾಡಿಸಿಕೊಂಡವರಿಗೆ ಪಾಸಿಟೀವ್ ಬಂದಿದೆ. ರಕ್ತ ಪರೀಕ್ಷೆಗೇ ಬರದೇ ಇರುವಂಥ ಗ್ರಾಮಾಂತರ ಪ್ರದೇಶದಲ್ಲಿ ಈ ಒಂದು ರೋಗಕ್ಕೆ ತುತ್ತಾಗಿರತಕ್ಕ ಸಾವಿರಾರು ಜನ ನನ್ನ ತೀರ್ಥಹಳ್ಳಿ ಕ್ಷೇತ್ರದಲ್ಲಿದ್ದಾರೆ. ಹೊಸನಗರ,

ಸಾಗರ ಮತ್ತು ತೀರ್ಥಹಳ್ಳಿ ವರಾಹಿ ಮತ್ತು ಶರಾವತಿ ಜಲಾನಯನ ಪ್ರದೇಶದ ಒಂದು ಪ್ರಾಜೆಕ್ಟ್ ಏರಿಯಾದಲ್ಲಿ ಸೊಳ್ಳೆಗಳು ವಿಪರೀತವಾಗಿ ಬರುವುದರಿಂದ ಅಲ್ಲಿ ಏನಾಗಿದೆ ಅಂದರೆ, ಆ ಮಾತ್ರೆ ಕೊಟ್ಟು 6 ಗಂಟೆಯ ನಂತರ ಅದು ರೆಸಿಸ್ಟೆನ್ಸ್ ಪವರ್ ಬರುತ್ತದೆ. ಆ ಸೊಳ್ಳೆ ಇನ್ನೊಬ್ಬರಿಗೆ ಕಚ್ಚಿದರೆ ರೋಗ ಬರುವುದಿಲ್ಲ. ಮಾತ್ರೆ ಕೊಡುವವರೇ ಗತಿ ಇಲ್ಲದೇ ಹೋದರೆ ದಿನಗಟ್ಟಲೆ ಆಗಿ ಅದು ಬೇರೆಯವರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಸ್ಪೈಡ್ ಆಗುತ್ತದೆ. ಮಲೇರಿಯಾವನ್ನು ಎರಾಡಿಕೇಟ್ ಮಾಡಿದ್ದೇವೆ ಎಂದು ಈಗಾಗಲೇ ಸರ್ಕಾರ ಘೋಷಣೆ ಮಾಡಿ ಕೈತೊಳೆದು ಕುಳಿತಿದೆ. ಇದರ ಸಲುವಾಗಿ ಹಿಂದೆ ಏನು ಬೇಸಿಕ್ ಹೆಲ್ತ್ ವರ್ಕರ್ಸ್ ಇದ್ದರೋ ಅವರು ಈಗಿಲ್ಲ. ಬಹಳ ವರ್ಷಗಳಿಂದ ಅವರುಗಳನ್ನು ರೆಕ್ರೂಟ್‌ಮೆಂಟ್ ಮಾಡಿಕೊಂಡಿಲ್ಲ. ಹೀಗಾಗಿ ದಾವಣಗೆರೆಯಲ್ಲಿ ಎರಡು ಸಾವಾಗಿದೆ ಎಂದು ಪತ್ರಿಕೆಯಲ್ಲಿ ಸುದ್ದಿ ಬಂದಿದೆ. ಕೇಂದ್ರ ಸರ್ಕಾರ ಇದರ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಸಹ ಮಾಡಿ ಅನೇಕ ಸಲಹೆಗಳನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಈಗಾಗಲೇ ಅದು ಕೊಟ್ಟಿದೆ. ಪತ್ರಿಕೆಯಲ್ಲೂ ಬಂದಿದೆ. ಆ ಸಲಹೆ ಪ್ರಕಾರ ಸರ್ಕಾರ ಏನು ನಡವಳಿಕೆಯನ್ನು ಮಾಡಿದೆ? ಒಂದು ಸ್ಪೆಷಲ್ ಟೀಮನ್ನು ಮಾಡಿ ನಮ್ಮ ಈ ಭಾಗದಲ್ಲಿ ಯುದ್ಧೋಪಾದಿಯಲ್ಲಿ ಮಾನ್ಯ ಮಂತ್ರಿಗಳು ನಿವಾರಣೆ ಮಾಡಲಿಕ್ಕೆ ಒಂದು ಪ್ರಯತ್ನ ಮಾಡದಿದ್ದರೆ ಕಷ್ಟವಾಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಅಶೋಕ್ ಕಾಟ್ಟೆರಿ : ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕಾಲರಾ ಹಬ್ಬಿದೆ ಎಂದು ನಿನ್ನೆ ಮೊನ್ನೆ ಪೇಪರ್‌ನಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಸದಸ್ಯರೊಬ್ಬರು : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಮಲೇರಿಯಾ ವ್ಯಾಪಕವಾಗಿ ಹರಡುತ್ತಿದೆ. ಸೊಳ್ಳೆಗಳ ನಿಯಂತ್ರಣದ ಬಗ್ಗೆ ಮತ್ತು ಔಷಧಿಗಳನ್ನು ಕೊಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ನನ್ನ ಕ್ಷೇತ್ರದಲ್ಲಿ ಮೆಹರುನ್ನೀಸಾ ಎಂದು ಒಬ್ಬ ಪೇಷೆಂಟ್ ಈಗಾಗಲೇ ಕಾಲರಾದಿಂದ ಪೀಡಿತಳಾಗಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾಳೆ. ಅದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಬ್ಬುವಂಥ ಸಾಧ್ಯತೆ ಇದೆ. ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಹುಬ್ಬಳ್ಳಿ ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಲರಾ ಹರಡದಂತೆ ದಯವಿಟ್ಟು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಾರುತಿರಾವ್ ಪವಾರ್ : ಈಗಾಗಲೇ ಮೈಸೂರು ನಗರದಲ್ಲಿ ಕರುಳುಬೇನೆ ಮತ್ತು ಕಾಲರಾದಿಂದ ಮೂರು ಜನ ತೀರಿದ್ದಾರೆ ಎಂದು ಹೇಳಿದ್ದಾರೆ. ಕಳೆದ ವರ್ಷ 15-20 ಜನ ಸತ್ತಿದ್ದರು. ದಯಾಮಾಡಿ ಅದರ ಬಗ್ಗೆ ಹೇಳಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ನೋಡಿ ಇದೆಲ್ಲಾ ಕವರ್ ಮಾಡಿ ನಿನ್ನೆ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿರತಕ್ಕ ವಿಚಾರವನ್ನು ಒಳಪಟ್ಟು ಎಲ್ಲದಕ್ಕೂ ಸಮಗ್ರವಾಗಿ ಉತ್ತರ ಕೊಟ್ಟುಬಿಡಿ.

* ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಸೊಳ್ಳೆ ಕಾಟ ಬರೀ ಶಿಕಾರಿಪುರ ಒಂದೇ ಅಲ್ಲ. ಇಡೀ ಕರ್ನಾಟಕದ ಎಲ್ಲಾ ಮೂಲೆಗಳಲ್ಲೂ ಇದೆ

ಮತ್ತು ಶಾಸನಸಭೆಯಲ್ಲೂ ಇದೆ. ಇಲ್ಲೇನು ಸೊಳ್ಳೆಗಳ ಕಾಟ ತಪ್ಪಿದೆ ಎಂದು ತಾವು ತಿಳಿದುಕೊಳ್ಳಬಾರದು. ತಮಗೆ ಆ ಸೊಳ್ಳೆಗಳು ಕಡಿದಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಮಗಂತೂ ಖಂಡಿತವಾಗಿ ಕಡಿದಿದೆ. ಅದರಲ್ಲೇನೂ ಅನುಮಾನ ಇಲ್ಲ. ಅದಕ್ಕೆ ನಾನು ಈ ವಿಚಾರವನ್ನು. . . .

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರು ಸೊಳ್ಳೆಗಳ ಕೈಯಲ್ಲಿ ಕಚ್ಚಿಸಿಕೊಂಡು ಬಂದಿದ್ದರೆ ಇವರ ಟ್ರೀಟ್‌ಮೆಂಟ್‌ಗೆ ಹೆಲ್ತ್ ಮಿನಿಸ್ಟರ್ ವಿಶೇಷ ಗಮನ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತದೆ, ಸೊಳ್ಳೆಗಳ ಕಡಿತ ಮತ್ತು ಕಾಟ ಇಡೀ ಕರ್ನಾಟಕ ಉದ್ದಗಲಕ್ಕೂ ಇದೆ. ಬೆಂಗಳೂರಿನಲ್ಲಂತೂ ತೀರಾ ವಿಪರೀತ ಇದೆ. ಈ ಚರಂಡಿಗಳು, ಕೊಳಚೆಗಳು ಯಾವ ಮೂಲೆಯಲ್ಲಿ ನೋಡಿದರೂ ಇವೆ, ಇವುಗಳನ್ನು ಸರಿಪಡಿಸುವುದಕ್ಕೆ ನಗರ ಸಭೆಯವರಿಗಾಗಲೀ ಪುರಸಭೆಗಾಗಲೀ ಯಾರಿಗೇ ಆಗಲೀ ಆಗಿಲ್ಲ. ಪುರಸಭೆಗಳಿಗೆ ಆಗದೇ ಇರುವುದಕ್ಕೆ ಕಾರಣ ಅನೇಕ ಪುರಸಭೆಗಳಿಗೆ ಸೊಳ್ಳೆಗಳನ್ನು ಹೋಗಲಾಡಿಸುವ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಹಣ ಕೂಡ ಇಲ್ಲ ಇನ್ನು ಅವರನ್ನು ಸೊಳ್ಳೆ ಓಡಿಸಿ ಎಂದರೆ ಎಲ್ಲಿ ಓಡಿಸುವುದಕ್ಕೆ ಸಾಧ್ಯ? ಸಾಧ್ಯವಿಲ್ಲ. ಅಧ್ಯಕ್ಷರೇ, ಸೊಳ್ಳೆ ಒಂದೇ ಅಲ್ಲ ಇದರ ಜೊತೆಗೆ ಹುಚ್ಚುನಾಯಿಗಳ ಕಾಟ. ಇದು ಅನೇಕ ಕಡೇ ಇದೆ. ಇದು ನಗುವಂಥದ್ದು ಅಲ್ಲ.., ಅನೇಕ ಕಡೆ ಇದೆ. ನಾನು ಸ್ವಲ್ಪ ಹೆಚ್ಚು ಕಡಿಮೆ ಮೈಸೂರಿನ ಅನೇಕ ಕಡೆ ನೋಡಿದ್ದೇನೆ, ಬೆಂಗಳೂರಿನಲ್ಲಿ ನೋಡಿದ್ದೇನೆ. ನಾನು ಎಲ್ಲೆಲ್ಲಿ ಹೋಗುತ್ತೇನೆ ಅಲ್ಲಿ ಎಲ್ಲಾ ಕಡೆ ಈ ಹುಚ್ಚುನಾಯಿಗಳ ಕಾಟ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೇ, ಈ ಹುಚ್ಚುನಾಯಿ ನಮ್ಮ ಕ್ಷೇತ್ರ ಶಿಗ್ಗಾವಿಯಲ್ಲಿ ಹೋದ ವರ್ಷ ಒಂದು ಹಳ್ಳಿಯಲ್ಲಿ ಈ ವರ್ಷ ಶಿಗ್ಗಾವಿಯಲ್ಲಿ ಒಂದೇ ಸಾರಿಗೆ 50 ಜನರಿಗೆ ಕಡಿದಿದೆ. ಅದಕ್ಕೆ ಆಸ್ಪತ್ರೆಯಲ್ಲಿ ಔಷಧಿಯೇ ಸಿಗುವುದಿಲ್ಲ. ಈಗಾಗಲೇ ಮಂತ್ರಿಗಳಿಗೆ ವರದಿ ಬಂದಿರಬೇಕು.

ಅಧ್ಯಕ್ಷರು : ಮೈಸೂರಿನದೇ ಅಲ್ಲಿ ಶಿಗ್ಗಾವಿಗೆ ಬಂದಿತ್ತೇ?

ಶ್ರೀ ಜಗದೀಶ್ ಶೆಟ್ಟರ್ : ನಮ್ಮಲ್ಲಿ ಹಂದಿಗಳ ಕಾಟ ಇದೆ. ಇದರ ಬಗ್ಗೆಯೂ ಸರ್ಕಾರ ಗಮನಿಸಬೇಕು.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ಕಡೆ ಕೋತಿಗಳ ಕಾಟವೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಹುಚ್ಚುನಾಯಿಗಳ ವಿಚಾರ, ಕುಳಿತುಕೊಳ್ಳಿ ನೀವು.

ಶ್ರೀ ಎಂ. ನಾರಾಯಣಸ್ವಾಮಿ : ಕೋತಿಗಳ ಕಾಟವೂ ಇದ್ದು ಬೆಳೆ ಹಾಳಾಗುತ್ತಿದೆ

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನಾರಾಯಣ ಸ್ವಾಮಿಯವರ ಕೋತಿಗಳ ಕಾಟವನ್ನು ಆಮೇಲೆ ಮಾತನಾಡೋಣ. ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ, ಒಂದು ರೀತಿ ನಗು ಬರತಕ್ಕ ಪ್ರಶ್ನೆ, ಒಪ್ಪುತ್ತೇನೆ. ಅದಕ್ಕೆ ಕಾರಣಗಳು ಬಹಳ ಇವೆ. ಈಗ ಹುಚ್ಚುನಾಯಿ ಪರಿಸ್ಥಿತಿ ನೋಡಿದಾಗ ಅನೇಕ ಸ್ನೇಹಿತರು ಬಂಗಾರಪ್ಪನವರು ಇವರೆಲ್ಲಾ ನಗುವುದಕ್ಕೆ ಪ್ರಾರಂಭಿಸಿದರು,. ಏತಕ್ಕೆ ನಗುತ್ತಾರೆ ಇವರು ನನಗೆ ಅರ್ಥವಾಗಲಿಲ್ಲ.

ಇವರು ನಗುವುದನ್ನು ನೋಡಿ ನಾನು ನಗುವುದಕ್ಕೆ ಪ್ರಾರಂಭಿಸಿದೆ, ಈ ಪರಿಸ್ಥಿತಿ ಏನು? ಹುಚ್ಚು ನಾಯಿಗಳ ಕಾಟ ಇಲ್ಲವೋ? ರಾಜ್ಯದ ಅನೇಕ ಕಡೆ ಇದೆ. ನಾನೇನು ನಾಯಿಗಳನ್ನೆಲ್ಲಾ ಬೇಟೆಯಾಡಿ ಅವುಗಳೆನ್ನೆಲ್ಲಾ ಕೊಲ್ಲಬೇಕು ಎನ್ನತಕ್ಕ ಉದ್ದೇಶವಲ್ಲ. ಹಿಂದೆ ಲಕ್ಷ್ಮಣರಾಯರು ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳಾಗಿದ್ದಾಗ ಸ್ವಲ್ಪ ಹೆಚ್ಚು ಕಡಿಮೆ ಇಂಥ ಸಾವಿರಾರು ಹುಚ್ಚುನಾಯಿಗಳನ್ನು ಹಿಡಿಸಿ ಕೊಲ್ಲಿಸಿರತಕ್ಕದ್ದು ಸರ್ಕಾರದ ಆಜ್ಞೆಯೇ ಇದೆ. ಈಗ ಇವುಗಳ ಕಾಟ ಜಾಸ್ತಿಯಾಗಿದೆ ಎಂದರೆ , ಇದರ ಪರಿಣಾಮ ಏನಾಗುತ್ತದೆ. ಎನ್ನುವುದನ್ನು ತಾವು ನೋಡಬೇಕು. ಹುಚ್ಚು ನಾಯಿ ಕಡಿತದಿಂದ ಆಸ್ಪತ್ರೆಗೆ ಸೇರಿರತಕ್ಕ ಜನರ ಪರಿಸ್ಥಿತಿ ಏನು? ನಮಗೆ ಈ ಪ್ರಶ್ನೆ ಒಂದು ರೀತಿಯಲ್ಲಿ ಹಾಸ್ಯವಾಗಿದ್ದರು ಇದರ ಹಿಂದೆ ಇರತಕ್ಕಂಥ ಗಂಭೀರತೆ ಬಹಳ ವಿಚಾರ ಪೂರಿತವಾಗಿರತಕ್ಕಂಥಹದ್ದು. ಆ ಪ್ರಕಾರ ರಾಜಕಾರಿಣಿಗಳ. . .

ಶ್ರೀ ಎನ್ ರಾಜಣ್ಣ : ಬೆಂಗಳೂರು ನಗರದಲ್ಲಿ ನಾಯಿಗಳಿಗೆ ಕುಟುಂಬ ಯೋಜನೆ ಶುರುಮಾಡಿರುವುದರಿಂದ ನಾಯಿಗಳ ಸಂಖ್ಯೆ ಕಡಿಮೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಅವರನ್ನು ನೋಡಿ ನಿನ್ನೆ ಫಜೀತಿ ಮಾಡಿದ್ದರು ಇವತ್ತು ಏನೋ ಮಾಡುವುದಕ್ಕೆ ಹೊರಟಿದ್ದಾರೆ. ಸರಿಯಿಲ್ಲ.

ಅಧ್ಯಕ್ಷರು : ಇಲ್ಲ ಅವರ ಜವಾಬ್ದಾರಿಯನ್ನು ಸನ್ಮಾನ್ಯ ನಾಗೇಗೌಡರಿಗೆ ಒಪ್ಪಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾಗೇಗೌಡರಿಗೆ ಒಪ್ಪಿಸಿದ್ದೀರಾ ;

ಶ್ರೀ ಎನ್. ರಾಜಣ್ಣ : ನಿನ್ನೆ ನಾನು ಹೇಳಿದ್ದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಜನ್ಮ ಕೊಡಬೇಕಾದಂತಹ ತಾಯಿಗೆ ಎಷ್ಟು ನೋವಾಗುತ್ತದೆ ಎಂದು ನಾನು ಹೇಳಿದೆ. ಆದರೆ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವ ವಿಚಾರ. ನಿನ್ನೆಯ ವಿಚಾರವನ್ನು ಮತ್ತೆ ತೆಗೆಯುದಿಲ್ಲ ಅಧ್ಯಕ್ಷರೆ. ಇದರ ಜೊತೆ ನಾನು ನಿನ್ನೆ ಪ್ರಸ್ತಾವ ಮಾಡಿದ್ದೆ. ಮೈಸೂರು ಜಿಲ್ಲೆಯ ಮೈಸೂರು ಸೇರಿದಂತೆ ಜಿಲ್ಲೆಯ ಅನೇಕ ಕಡೆ ಕರಳುಬೇನೆ ಜಾಸ್ತಿಯಾಗಿದೆ. ಇದು ಪ್ರತಿ ವರ್ಷ ವ್ಯವಸ್ಥಿತವಾಗಿ ಬರುತ್ತಿರತಕ್ಕ, ಬರುತ್ತದೆಂದು ನಾವು ಅಂದುಕೊಂಡಿದ್ದೇವೆ. ಇದನ್ನು ತಡೆಗಟ್ಟುವುದಕ್ಕೆ ಪರಿಣಾಮಕಾರಿಯಾದ ಒಂದು ಯೋಜನೆಯನ್ನು ಸರ್ಕಾರ ಹಾಕಬೇಕಾಗುತ್ತದೆ. ಅದರಲ್ಲೂ ಬಹಳ ಹೆಚ್ಚಿನ ರೀತಿಯಲ್ಲಿ ಮೈಸೂರು ನಗರ ಮತ್ತು ಮೈಸೂರಿನ ಸುತ್ತ ಮುತ್ತ ಬರತಕ್ಕಂತಹ ತಾಲ್ಲೂಕುಗಳಲ್ಲಿ ಇದು ಕಾಣಿಸುತ್ತದೆ. ನನಗನ್ನಿಸುತ್ತದೆ, ಮೈಸೂರು ನಗರದಲ್ಲಿ ಯಾವುದೋ ಕಾಲದ ಒಳಚರಂಡಿ ವ್ಯವಸ್ಥೆ; ಅದಕ್ಕೆ ಒಂದು ಹೊಸ ಯೋಜನೆಯನ್ನು ಮಾಡಿ ಎಂದು ಬಹಳ ವರ್ಷಗಳಿಂದ ಹೇಳುತ್ತಲೇ ಬರುತ್ತಿದ್ದೇವೆ. ವಿಶೇಷವಾಗಿ ಹಣವನ್ನು ಕೊಟ್ಟು, ಅಲ್ಲಿಯ ಚರಂಡಿ ವ್ಯವಸ್ಥೆಯನ್ನು ಸರಿಪಡಿಸಿ; ಈ ಬಗ್ಗೆ ಮೊದಲಿನಿಂದಲೂ ನಮ್ಮ ಒತ್ತಾಯ ಇದೆ. ನಮ್ಮ ಜಿಲ್ಲೆಯವರೇ, ನಮ್ಮ ಸ್ನೇಹಿತರೆ, ಹಣಕಾಸು ಸಚಿವರಾಗಿ, ಆ ಮೈಸೂರಿನ ನಗರದ ಪ್ರಗತಿಗೆ ಹಣವನ್ನು ಜಾಸ್ತಿ ಇಡಲಿಲ್ಲ ಎಂದು ಅವರ ಮೇಲೆ ಆರೋಪವನ್ನು ನಾನು ಮಾಡುತ್ತಿಲ್ಲ. ಒಂದು ನೋವು. ಆ ನೋವನ್ನು ಅವರು ಅರಿತು ಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅದನ್ನು ಇಬ್ಬರೂ ಹಂಚಿಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಹಂಚಿಕೊಳ್ಳೋಣ. ಆದ್ದರಿಂದ ಮಾನ್ಯ ಮಂತ್ರಿಗಳು, ಕರಳು ಬೇನೆ ಹೋಗುವುದಕ್ಕೆ ಈಗ ಏನೇನು ಕ್ರಮ ತೆಗೆದುಕೊಂಡಿದ್ದಾರೆ, ಸತ್ತಿರುವವರಿಗೆ ಪರಿಹಾರವನ್ನು ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದಾರೋ? ಮುಂದೆ ಇದನ್ನು ತಡೆಗಟ್ಟುತಕ್ಕಂತಹ ವ್ಯವಸ್ಥೆ ಏನು? ಮತ್ತು ಹುಚ್ಚು ನಾಯಿಗಳನ್ನು ತಡೆಹಿಡಿಯುವುದಕ್ಕೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀಮತಿ ಪ್ರಮಿಳಾ ನೇಸರ್ಗಿ : ಬೆಂಗಳೂರು ನಗರದಲ್ಲಿರತಕ್ಕ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ಕೆಂಪಾಂಬುದಿ ಕೆರೆ ಇವತ್ತಿನ ದಿವಸ ಮಸ್ಕಿಟೋ ಬ್ರೀಡಿಂಗ್ ಸೆಂಟರ್ ಆಗಿದೆ. ತಮಗೆ ಆಶ್ಚರ್ಯ ಆಗಬಹುದು. ಇಡೀ ಬೆಂಗಳೂರು ನಗರದ ಎಲ್ಲಾ ಸೀವರೇಜ್‌ನ್ನು ಇವತ್ತು ಕೆಂಪಾಂಬುದಿ ಕೆರೆಗೆ ಬಿಡುತ್ತಿದ್ದಾರೆ. ಸರಿಯಾದ ವ್ಯವಸ್ಥೆಯನ್ನೇ ಮಾಡಿಲ್ಲ. ನಾನು 10-15 ವರ್ಷಗಳಿಂದ ಬೆಂಗಳೂರನ್ನು ನೋಡುತ್ತಿದ್ದೇನೆ. ಶ್ರೀಮಾನ್ ನಂಜೇಗೌಡರಿಗೂ ಗೊತ್ತಿದೆ. ನಾವು ಹೋಗಿ ನೋಡಿದರೆ ಇಡೀ ಬೆಂಗಳೂರು ನಗರದ ಸೀವರೇಜ್‌ನ್ನು ಆ ಕೆರೆಗೆ ಬಿಡುತ್ತಿದ್ದಾರೆ. ಅದರ ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ಅದು ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ ಆಗಿದೆ. ಇದಕ್ಕೆ ಮಸ್ಕಿಟೋ ಎರಾಡಿಕೇಷನ್ ಸ್ಕೀಮನ್ನು ತಾವು ದಯವಿಟ್ಟು ಹಾಕಿಕೊಳ್ಳಬೇಕಾಗುತ್ತದೆ. ವಾರ್ ಫುಟ್ಟಿಂಗ್‌ನಲ್ಲಿ ಆ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇಡೀ ಬೆಂಗಳೂರು ಇವತ್ತು ಮಲೇರಿಯಾ ಆವರಿಸತಕ್ಕಂತಹ ಪರಿಸ್ಥಿತಿ ಒದಗಿ ಬರುತ್ತದೆ. ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿದೆ. ಅದರ ಬಗ್ಗೆ ಏನು ಮಾಡುತ್ತಾರೆಂಬುದನ್ನು ಮಾನ್ಯ ಮಂತ್ರಿಗಳು ಸಭೆಯ ಗಮನಕ್ಕೆ ತಿಳಿಸಬೇಕು.

* ಶ್ರೀ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರುವ ಹಾಗೆ ನಮ್ಮ ರಾಜ್ಯದ ಸುಮಾರು 3-4 ಜಿಲ್ಲೆಗಳಲ್ಲಿ ಅಂದರೆ ಮಂಗಳೂರು, ಹಾಸನ, ಶಿವಮೊಗ್ಗ ಹಾಗೂ ಕೊಡಗು ಈ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಲೇರಿಯ ಪಾಸಿಟೀವ್ ರೋಗಗಳು ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಕ್ಲೋರೋಫಿನ್ ಮಾತ್ರೆಯನ್ನು ವ್ಯಾಪಕವಾಗಿ ಕೊಡುವುದರ ಜೊತೆಗೆ ಬಚ್ಚಲು ಗುಂಡಿಯಿಂದ ಉತ್ಪಾದನೆಯಾಗತಕ್ಕ ಸೊಳ್ಳೆಗಳನ್ನು ನಿರ್ಮೂಲನೆ ಮಾಡುವುದಕ್ಕೆ ಮತ್ತು ಆಸ್ಪತ್ರೆಗಳಲ್ಲಿ ಮಲೇರಿಯಾ ಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡಿ, ಅದರ ಮುಖಾಂತರ ಮಲೇರಿಯಾ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೆವೆ. ನಿನ್ನೆ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರಿಗೆ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದ್ದೇನೆ. ಮಲೇರಿಯಾ ರೋಗವನ್ನು ತಡೆಗಟ್ಟುವ ವಿಚಾರದಲ್ಲಿ ಒಂದು ವೈದ್ಯರ ಸಮಿತಿ ಅಥವಾ ತಂಡವನ್ನು ರಚನೆ ಮಾಡಿ, ಈ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಮಲೇರಿಯಾ ಸರ್ವೆಯನ್ನು ಮಾಡಿ, ಮಲೇರಿಯಾ ತಗುಲಿರತಕ್ಕಂತಹ ರೋಗಿಗಳಿಗೆ ಶುಶ್ರೂಷೆಯನ್ನು ಕೊಡತಕ್ಕಂತಹದ್ದು ಮತ್ತು ತಡಗಟ್ಟಲಿಕ್ಕೆ ಅಗತ್ಯ ಇರುವ ನೈರ್ಮಲ್ಯ

ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೇನೆ. ಈಗಾಗಲೇ ನಮ್ಮ ಹಿರಿಯ ಸಚಿವರಾದಂತಹ ಸನ್ಮಾನ್ಯ ಜಾಲಪ್ಪನವರ ನೇತ್ರತ್ವದಲ್ಲಿ, ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಸನ್ಮಾನ್ಯ ನಗರಾಭಿವೃದ್ಧಿ ಸಚಿವರು ಮತ್ತು ಪಲ್ಯೂಷನ್ ಕಂಟ್ರೋಲ್ ಸಚಿವರು, ಹಾಗೂ ನನ್ನನ್ನು ಸೇರಿಸಿ ಸಭೆಯನ್ನು ನಡೆಸಿ, ಕುಡಿಯುವ ನೀರಿನಿಂದ ಮತ್ತು ನೈರ್ಮಲ್ಯದ ಅಭಾವದಿಂದ ಉಂಟಾಗತಕ್ಕಂತಹ ಕರುಳು ಬೇನೆ ಇರಬಹುದು ಅಥವಾ ಮಲೇರಿಯಾ ರೋಗ ಇರಬಹುದು. ಇವನ್ನು ತಡೆಗಟ್ಟುವುದಕ್ಕೆ ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮಂತ್ರಿಗಳ ಸಭೆಯನ್ನು ಇವತ್ತು ಸಂಜೆ ಕರೆದು ಅದರಲ್ಲಿ ಚರ್ಚೆ ಮಾಡಿ, ಅಗತ್ಯ ಇರುವ ಎಲ್ಲಾ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ. ಮಾನ್ಯ ಹಿರಿಯ ಸದಸ್ಯರಾದಂತಹ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದ ಹಾಗೆ, ಹುಚ್ಚು ನಾಯಿ ಕಡಿತದಿಂದ ಉಂಟಾಗತಕ್ಕಂತಹ ರೋಗದ ನಿವಾರಣೆಗೆ ಅಗತ್ಯ ಇರುವ ಔಷಧಿಗಳನ್ನು ಎಲ್ಲಾ ಆಸ್ಪತ್ರೆಗಳಿಗೂ ಕಳುಹಿಸಿಕೊಟ್ಟಿದೆ. ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ಅನ್‌ಸರ್ಟಿಫೈಡ್ ನಾಯಿಗಳನ್ನು ಹಿಡಿದು ಕೊಲ್ಲತಕ್ಕ ಕ್ರಮ ಈಗಲೂ ಇದೆ. ಅದಕ್ಕಾಗಿ ಅರ್ಬನ್ ಡೆವಲಪ್‌ಮಂಟ್ ಮಂತ್ರಿಗಳನ್ನೂ ಇಂದು ಸಂಜೆ ಕಂದಾಯ ಸಚಿವರ ಕೊಠಡಿಯಲ್ಲಿ ನಡೆಯಲಿರುವ ಸಭೆಗೆ ಕರೆದಿದ್ದೇನೆ, ಈ ಎಲ್ಲಾ ಸಮಸ್ಯೆಗಳ ನಿವಾರಣೆಗಾಗಿ ಆದಷ್ಟು ಜಾಗ್ರತೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ಹೇಳುತ್ತೇನೆ. ವಿಶೇಷವಾಗಿ ಮೈಸೂರು ಜಿಲ್ಲೆಯಲ್ಲಿ ಕರಳು ಬೇನೆ ಕಾಣಿಸಿಕೊಳ್ಳುತ್ತಿದೆ. ಅಲ್ಲಲ್ಲಿ ಹೆಚ್ಚಾಗಿ ಸ್ಪೋ ಕೇಸಸ್ ಬರುತ್ತಾ ಇವೆ. ಮೈಸೂರು ಜಿಲ್ಲೆಯಲ್ಲಿ ಕರುಳುಬೇನೆ ಪ್ರಕರಣಗಳು 11-4-95ರಿಂದ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿರುವುದು ಕಂಡು ಬರುತ್ತಿದೆ. ನಾನು ಖುದ್ದಾಗಿ ಎಲ್ಲಾ ಆಸ್ಪತ್ರೆಗಳಿಗೆ ಭೇಟಿ ಮಾಡಿದ್ದೇನೆ. ನಮ್ಮ ನಿರ್ದೇಶಕರು ಹೋಗಿ ಬಂದಿದ್ದಾರೆ. ಸಾಂಕ್ರಾಮಿಕ ರೋಗಗಳ ಜಂಟಿ ನಿರ್ದೇಶಕರನ್ನು ಅಲ್ಲೇ ಬಿಟ್ಟಿದ್ದೇನೆ. ಪ್ರತಿ ತಾಲ್ಲೂಕು ಆಸ್ಪತ್ರೆಗಳಲ್ಲಿ 2 ಅಂಬ್ಯುಲೆನ್ಸ್ ಇಟ್ಟು, ವೀಡಿಯೋ ಕ್ಯಾಸೆಟ್‌ಗಳ ಮುಖಾಂತರ ಈ ಕರಳು ಬೇನೆ ಕಲುಷಿತ ನೀರಿನಿಂದ ಹೇಗೆ ಉಂಟಾಗುತ್ತದೆ.? ಅದನ್ನು ನಿವಾರಣೆ ಮಾಡುವುದಕ್ಕೆ ಜನರು ಹೇಗೆ ಎಚ್ಚರ ವಹಿಸಬೇಕು. ಮತ್ತೆ ಪುರಸಭೆ ವ್ಯಾಪ್ತಿಯೊಳಗೆ ಕ್ಲೋರಿನೇಷನ್ ಮಾಡತಕ್ಕಂಥಹದ್ದು ? ಕಾಯಿಸಿದ ನೀರನ್ನು ಕುಡಿಯತಕ್ಕಂಥಹದ್ದು? ಈ ರೀತಿಯ ಮುಂಜಾಗ್ರತೆ ಕ್ರಮವನ್ನು ಮತ್ತು ಆರೋಗ್ಯದ ಬಗ್ಗೆ ಜನರಲ್ಲಿ ಜಾಗೃತಿ ಉಂಟು ಮಾಡತಕ್ಕ ರೀತಿಯಲ್ಲಿ ಮೈಸೂರು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಜಿಲ್ಲಾ ಆರೋಗ್ಯ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಮತ್ತು ಕಾರ್ಯದರ್ಶಿಗಳ ಸಭೆಯನ್ನು ನಡೆಸಿ, ಅವರಿಗೆ 100-150 ಕೆ.ಜಿ.ಯಷ್ಟು ಕ್ಲೋರಿನ್ ಅನ್ನು ಕೊಟ್ಟು ಸಿಂಪಡಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾಧಿಕಾರಿಗಳ ಮುಖಾಂತರ ಸಭೆ ನಡೆಸಿ ಜಾಗೃತಿಯನ್ನು ಉಂಟು ಮಾಡತಕ್ಕ ಕೆಲಸವನ್ನೂ ನಾವು ಮಾಡಿಸುತ್ತಿದ್ದೇವೆ. ಯುದ್ಧದೋಪಾದಿಯಲ್ಲಿ ಈ ರೋಗವನ್ನು ತಡೆಗೆಟ್ಟುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಅಲ್ಲೇ ವಿಜಿಲೆನ್ಸ್ ಟೀಮನ್ನು ಇಟ್ಟಿದ್ದೇವೆ, ಸಾಂಕ್ರಾಮಿಕ ರೋಗಗಳ ಜಂಟಿ ನಿರ್ದೇಶಕರು ಅಲ್ಲೇ 2-3 ದಿವಸಗಳಿಂದ ಕ್ಯಾಂಪ್ ಮಾಡಿದ್ದಾರೆ. ಎಲ್ಲಾ

ತಾಲ್ಲೂಕುಗಳಲ್ಲೂ ಖುದ್ದಾಗಿ ಭೇಟಿ ನೀಡಿ, ಅಲ್ಲಿ ನೀರನ್ನು ಸಂಗ್ರಹ ಮಾಡಿ, ಅದರ ವಿಶ್ಲೇಷಣೆ ಮಾಡಿ, ಎಲ್ಲೆಲ್ಲಿ ಪಾಸಿಟೀವ್ ಪ್ಲೇಸ್‌ಗಳು ಇವೆ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಅದೇಶವನ್ನು ಕೊಟ್ಟು ಕೆಲಸವನ್ನು ಮಾಡುತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧಿಕಾರಿಗಳಿಂದ ವರದಿ ತರಿಸಿಕೊಂಡಿರಬಹುದು. ತೀರ್ಥಹಳ್ಳಿಯಲ್ಲಿ 242 ಕೇಸು ಒಂದು ವಾರದಲ್ಲಿ ಪಾಸಿಟೀವ್ ಎಂದು ಬಂದಿರುವುದು ನಿಜವೆ ? ಚಿತ್ರದುರ್ಗ ಜಿಲ್ಲೆಯಲ್ಲಿ ಇದೇ ಬಾಯಿಲೆಗೆ ತುತ್ತಾಗಿ ಇಬ್ಬರು ಸತ್ತಿರುವುದು ನಿಜವೆ ? ತಾವು ಹೇಳಿದ್ದೀರಿ. ಔಷಧಿ ಸರಬರಾಜನ್ನು ನಾವು ಮಾಡುವಂತಹ ವ್ಯವಸ್ಥೆ ಮಾಡಿದ್ದೇವೆ ಎಂದು ತಾವು ಕೆ.ಎಂ.ಸಿ. ಆಸ್ಪತ್ರೆಯಲ್ಲಿ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಾಗ ಯಾವುದೋ ಕಾರಣದಿಂದ ತಮಾಷೆಯಾಗಿ ತೆಗೆದುಕೊಂಡೆವು.

ಅಧ್ಯಕ್ಷರು : ಒಂದು ಸ್ಪೆಷಲ್ ಟೀಮನ್ನು ಕಳುಹಿಸಿ ಮಾಡಿಸೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇವರಿಗೆ ವರದಿ ಬಂದಿರುವುದು ನಿಜವೆ? ಕೆ.ಎಂ.ಸಿ. ಯಲ್ಲಿ ಔಷಧಿ ಇಲ್ಲದೆ 22 ವರ್ಷದ ಒಬ್ಬ ಹೆಣ್ಣು ಮಗಳು, ವಿದ್ಯಾವಂತೆ ಬಿ.ಎ. ಓದುತ್ತಿದ್ದ ಹುಡುಗಿ ಸಾವಿಗೆ ಈಡಾದಳು. ಹುಚ್ಚು ನಾಯಿ ಕಡಿತಕ್ಕೆ ಔಷಧಿ ಇಲ್ಲವೆಂದು ತಾವು ಸದನದಲ್ಲಿ ಉತ್ತರ ಕೊಡಬೇಕಾದರೆ ಹೇಳಿದ್ದೀರಾ, ಈ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಇವತ್ತೇ ಕುಳಿತು, ವಿಶೇಷವಾಗಿ ಅದರ ಬಗ್ಗೆ ಗಮನ ಕೊಡಿ. ವಿಶೇಷವಾಗಿ ಈ ಸಾಂಕ್ರಾಮಿಕ ರೋಗ ಎಲ್ಲಕಡೆ ಏನು ಹರಡುತ್ತಿದೆ, ಇದರ ಬಗ್ಗೆ ನಿಮಗೆ ವರದಿ ಬಂದಿದೆ. ಕೆಲಸವನ್ನು ತಮ್ಮ ಗಮನಕ್ಕೆ ತರುವಂತಹ ಪ್ರಯತ್ನ ಮಾಡಿದ್ದೀರಾ, ಈ ತರಹ 220 ಪಾಸಿಟೀವ್ ಬಂದಿದ್ದರೆ ಅದಕ್ಕೆ ರ್‍ಯಾಡಿಕಲ್ ಟ್ರೀಟ್‌ಮೆಂಟ್ ಕೊಡಬೇಕಾಗುತ್ತದೆ. ಇದರ ಬಗ್ಗೆ ವಿಶೇಷ ವ್ಯವಸ್ಥೆ ಮಾಡಬೇಕಾಗುತ್ತದೆ. ಇದು ಒಂದು ಸಾರಿ ಹರಡಿದ ಮೇಲೆ ಕಂಟ್ರೋಲ್ ಮಾಡುವುದು ನಮಗೂ ನಿಮಗೂ ಕಷ್ಟವಾಗುತ್ತದೆ.

ಡಾ: ಜೀವರಾಜ್ ಆಳ್ವ : ಆರೋಗ್ಯ ಸಚಿವರು ಯುದ್ಧದೋಪಾದಿಯಲ್ಲಿ ಕೆಲಸ ಮಾಡುತ್ತೇವೆಂದು ಹೇಳಿದರು. ಅದಕ್ಕೆ ಒಂದು ಸೂಚನೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ನಾವು 1995ರಲ್ಲಿದ್ದೇವೆ. 30 ವರ್ಷಗಳ ಹಿಂದೆ ನನ್ನ ತಂದೆಯವರು ಡಾ: ನಾಗಪ್ಪ ಆಳ್ವರವರು ಉತ್ತರ ಕೊಡುತ್ತಿದ್ದರು. ಕ್ಲೋರ ಪಿಂಟ್ ಟ್ಯಾಬೆಲೆಟ್ ಇದೆ, ಡಿ.ಡಿ.ಟಿ. ಕ್ಲೋರಿನ್ ಬಹಳ ಹಿಂದೆ ಇದ್ದಂತಹದ್ದು ಅದೇ ರೀತಿ ಉತ್ತರ ಕೊಡುತ್ತಿದ್ದೀರಿ. ಹೊಸ ಆರೋಗ್ಯ ಮಂತ್ರಿಗಳಾಗಿ ಬಂದಿದ್ದೀರಿ. ಶ್ರೀಮತಿ ಪ್ರಮಿಳಾ ರವರು ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. Your are the custodian of health of the entire state.

ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೀವರೇಜ್ ಬೋರ್ಡ್‌ನ, ಎಲ್ಲಾ ಭಾಗದ ಸೀವರೇಜ್ ಪ್ರತಿಯೊಂದು ಕೆರೆಗಳಿಗೆ ಹೋಗುತ್ತಿದೆ. Not even 10% of the sewerage is treated. ನೀವು ಆರೋಗ್ಯ ಸಚಿವರಾಗಿ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೀವರೇಜ್ ಬೋರ್ಡ್ ಮತ್ತು ಇದರ ಅರ್ಬನ್ ಸಪ್ಲೈಸನ್ನು ಸೂವ್ ಮಾಡುತ್ತೀರಾ ?

ಅಧ್ಯಕ್ಷರು : ಸೂವ್ ಮಾಡುವುದು ಬೇಡ.

ಡಾ: ಜೀವರಾಳ್ ಆಳ್ವ : ಅಲ್ಲ, ಅದು ಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, It is a very serious matter.

ಬೆಂಗಳೂರಿನಲ್ಲಿ ಕೆಂಪಾಂಬುಧಿ ಇರಬಹುದು, ಹೆಬ್ಬಾಳದ ಲೇಕ್ ಇರಬಹುದು ಒಂದು ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಹೆಬ್ಬಾಳದಲ್ಲಾಗಿದೆ. ಅದು ಇನ್ನೂ ಕಮಿಷನ್ ಆಗಿಲ್ಲ. ಕೋಟಿಗಟ್ಟಲೆ ಹಣ ಖರ್ಚಾಗಿದೆ. 10 ಪರ್ಸೆಂಟ್ ಸೀವರೇಜ್ ವಾಟರ್ ಇಟ್ಟುಕೊಂಡು ನೀವು ಯಾವ ಮಲೇರಿಯಾವನ್ನೂ ನಿಲ್ಲಿಸುವುದಕ್ಕೆ ಆಗುವುದಿಲ್ಲ, ಯಾವ ಕಾಲರಾವನ್ನೂ ನಿಲ್ಲಿಸುವುದಕ್ಕಾಗುವುದಿಲ್ಲ. ಆದ್ದರಿಂದ if you mean business - ಕ್ಲೋರಿನ್, ಕ್ಲೋರೆಂಪೀನ್ ಎಂದು ಹೇಳಿಕೊಂಡು ಮೂವತ್ತು ವರ್ಷಗಳ ಹಿಂದಿನ ಆರೋಗ್ಯ ಸಚಿವರು ಹೇಳಿದ್ದನ್ನೇ ಇವತ್ತು ಕೂಡ ಹೇಳುತ್ತಾ ಇದ್ದರೆ ಹೇಗೆ? ಮಾನ್ಯ ಸಚಿವರಾದ ಮಹದೇವಪ್ಪನವರಿಂದ ಬಹಳಷ್ಟು ಅಪೇಕ್ಷೆ ಪಡುತ್ತೇವೆ. He must come up to the expectation. He must sue the Water Board as Health Minister. Ultimately, the BWSSB or various other agencies which are involved in water treatment are responsible.

ಆಮೇಲೆ ಟ್ಯಾಬ್ಲೇಟ್, ವೈಲೆಬಿಲಿಟಿ ಆಗುತ್ತದೆ ಎಂದು ತಮಗೆ ಸೂಚನೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಆ ಸೂವ್ ಒಂದನ್ನು ಬಿಟ್ಟು ಬೇರೆ ಎಲ್ಲಾ ಮಾಡಿ.

ಶ್ರಿ ಯೋಗೀಶ್ ಭಟ್ : ಸ್ವಾಮಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಎ.ಆರ್.ವಿ. ಎಂದು ಏನು ಔಷಧಿಗಳನ್ನು ಕೊಡುತ್ತಿದ್ದಾರೆ ಅದು ಔಟ್‌ಡೇಟೆಡ್. ಯಾರೂ ಪ್ರೈವೇಟ್‌ನಲ್ಲಿ ಈ ಔಷಧಿಯನ್ನು ತೆಗೆದುಕೊಳ್ಳುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಮಿತ್ ಮತ್ತು ಕೆಡಿಲಾ ಕಂಪನಿಗಳು ತಯಾರಿಸುವಂಥ ಔಷಧಿ, ಅದು ಮೂರು ರೋಸ್‌ಗೆ ಒಂದೂವರೆ ಸಾವಿರ ರೂಪಾಯಿ ಆಗುತ್ತದೆ. ಇದನ್ನು ಸರ್ಕಾರಿ ಸ್ವಾಮ್ಯದಲ್ಲಿರುವಂಥ ಲ್ಯಾಬರೇಟರಿಗಳಿಗೆ ಸಪ್ಲೈ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನನ್ನ ಸಲಹೆ. ಈ ಎ.ಆರ್.ವಿ. ಈಗ ಔಟ್‌ಡೇಟೆಡ್ ಔಷಧಿಯಾಗಿದೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಅದನ್ನೇ ಕೊಡುತ್ತಿದ್ದಾರೆ. ಅದರ ಬದಲಿಗೆ ಹೊಸ ಔಷಧಿಯನ್ನು ಕೊಡಬೇಕೆಂದು ನನ್ನ ವಿನಂತಿ, ಅಷ್ಟೆ.

ಅಧ್ಯಕ್ಷರು : ಈ ಸಲಹೆಯನ್ನು ನೀವು ಗಮನದಲ್ಲಿಟ್ಟುಕೊಳ್ಳಿ.

ಶ್ರೀ ಬಿ. ಮುನಿಯಪ್ಪ : ಅಧ್ಯಕ್ಷರೇ, ಬೆಂಗಳೂರಿನಲ್ಲಿ ಕಬ್ಬನ್‌ಪಾರ್ಕ್, ವಿಧಾನ ಸೌಧದ ಸುತ್ತಮುತ್ತ ಇರತಕ್ಕ ಪ್ರದೇಶ ಏನಿದೆ, ಬೆಳಗಿನ ಹೊತ್ತು ವಾಟಾಳ್ ನಾಗರಾಜ್, ನಾವೆಲ್ಲಾ ವಾಕಿಂಗ್ ಹೋಗುವಾಗ ಆ ಪ್ರೆಸ್‌ಕ್ಲಬ್ ರೋಡ್ ಇದೆಯಲ್ಲ, ಅಲ್ಲಿ ನೂರಾರು ಹುಚ್ಚುನಾಯಿಗಳು ಇರುತ್ತವೆ. ಆ ಹುಚ್ಚುನಾಯಿಗಳಿಂದ ತಪ್ಪಿಸಿಕೊಂಡು ಮುಂದೆ ಹೋಗಬೇಕೆಂದರೆ ...

ಅಧ್ಯಕ್ಷರು : ನೀವು ಏನು ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡುತ್ತಿದ್ದೀರಿ, ಅದೇ ಗೊತ್ತಾಗುತ್ತಿಲ್ಲ.

ಶ್ರೀ ಬಿ. ಮುನಿಯಪ್ಪ : ನಾನು ಪೂರ್ತಿ ಮಾತನಾಡಿಬಿಟ್ಟರೆ ತಮಗೇ ಅರ್ಥವಾಗುತ್ತದೆ. ನನಗೆ ಒಂದು ನಿಮಿಷ ಅವಕಾಶ ಕೊಡಿ. ಹಚ್ಚುನಾಯಿಗಳಿಂದ ತಪ್ಪಿಸಿಕೊಂಡು ಹೋಗುವುದು ನಮಗೆ ಕಷ್ಟ ಆಗುತ್ತಾ ಇಲ್ಲ. ಇವತ್ತು ಮಧ್ಯಾಹ್ನ 3 ಗಂಟೆಗೆ ಪ್ರೆಸ್ ಕ್ಲಬ್‌ಗೆ ಒಂದು ಹುಚ್ಚುನಾಯಿ ಬರುತ್ತಾ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, 8.4.95ರಂದು ಶಿವಮೊಗ್ಗದಲ್ಲಿ ಒಂದು ಕಾರ್ಯಕ್ರಮವಾಗಿ, ಈ ಕಾರ್ಯಕ್ರಮದ ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸುಬ್ರಹ್ಮಣ್ಯಸ್ವಾಮಿ ಅವರ ಬಗ್ಗೆ ಅಭಿಪ್ರಾಯ ವ್ಯತ್ಯಾಸ ಇರಬಹುದು. ಆದರೆ, ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅದು ಯಾರೇ ಇರಬಹುದು ...

Mr. Speaker : I will get the records ....

ಶ್ರೀ ಬಿ. ಮುನಿಯಪ್ಪ : ಅವರು ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಲ್ಲದೇ ಇರುವ ರಾಜ್ಯದಲ್ಲಿ ಯಾರೂ ಆಳಬಾರದು ಅಂತ ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹಾಗೆ ಹೇಳುವುದು ಸರಿಯಲ್ಲ.

Mr. Speaker : I will get the records and examine. Whatever is not in good taste, it will not be placed on records.

(2) ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಾಸಕರಿಗೆ ಪ್ರತಿನಿಧ್ಯ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, 8.4.1995ರಂದು ಶಿವಮೊಗ್ಗದಲ್ಲಿ ಒಂದು ಕಾರ್ಯಕ್ರಮವಾಯಿತು. ಆ ಕಾರ್ಯಕ್ರಮದ ವ್ಯವಸ್ಥೆಯಿಂದ ಮನಸ್ಸಿಗೆ ನೊಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಒಂದು ಅಭೂತಪೂರ್ವವಾದಂಥ ಕಾರ್ಯಕ್ರಮ. ಕುವೆಂಪು ರಂಗಮಂದಿರದ ಉದ್ಘಾಟನೆ. ನಾನು ಈ ರಂಗಮಂದಿರ ತಯಾರಾಗುವುದಕ್ಕೆ ಕಳೆದ ಆರು ವರ್ಷಗಳಿಂದ ಸತತವಾಗಿ ಹೋರಾಟ ಮಾಡಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ. ನಾನು ನಿಮ್ಮ ನೆರವಿಗೆ ಬರುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ನಿಮಿಷದಲ್ಲಿ ನಾನು ಹೇಳಿಬಿಡುತ್ತೇನೆ. ನಾನು ಆರು ವರ್ಷ ಕಾಲ ಹೋರಾಟ ಮಾಡಿ ಈ ರಂಗಮಂದಿರ ನಿರ್ಮಾಣವಾಯಿತು. ಅಂದು ಈ ಕಾರ್ಯಕ್ರಮವಾದ ನಂತರ ನಾನು ಮತ್ತು ಮುಖ್ಯಮಂತ್ರಿಗಳ ಇಬ್ಬರ ಹೆಸರುಗಳು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ರೀತಿಯಲ್ಲಿ ಚರ್ಚೆಗೆ ವಸ್ತುವಾಗಿಬಿಟ್ಟಿವೆ. ನಾನು ಸ್ಥಳೀಯ ಶಾಸಕನಾಗಿರುವಾಗ ಈ ರಂಗಮಂದಿರದ ಬಗ್ಗೆ ಒಂದು ಜಾಹೀರಾತನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ಥಳೀಯ ಶಾಸಕನಾಗಿ ನನ್ನ ಹೆಸರೇ ಇಲ್ಲ. ನಾನು ಬಿ.ಜೆ.ಪಿ. ಶಾಸಕನಾಗಿದ್ದೇ ತಪ್ಪೆ ? ನನಗಂತೂ ಇದು ಅರ್ಥವಾಗುತ್ತಿಲ್ಲ. ಸ್ಥಳೀಯ ಶಾಸಕರಿಗೆ ಪ್ರತಿಯೊಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಶಾಸಕರಿಗೆ ಹೆಚ್ಚು ಸ್ಥಾನಮಾನ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ